ಕರ್ನಾಟಕ ವಿಧಾನ ಸಭೆ, ಸಂಶೋಧನೆ ಮತ್ತು ಉಲ್ಲೇಖನ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ
ದಿನಾಂಕ : DATE : 20/1/2020

# ಸಂಪುಟಕ್ಕೆ ಹೊಸ ಬಣ್ಣ

## ಡಿಸಿಎಂಗಳಿಗೆ ತೂಗುಗತ್ತಿ । ಅರ್ಹರಿಗೆ ಮಣೆ

ಸಂ.ಕ ಸಮಾಚಾರ ಬೆಂಗಳೂರು

ನನೆಗುದಿಗೆ ಬಿದ್ದಿರುವ ಸಚಿವ ಸಂಪುಟ ವಿಸ್ತರಣೆಯನ್ನ ನೆರವೇರಿಸಿ ಅದಕ್ಕೆ ಹೊಸಬಣ್ಣ ನೀಡುವ ನಿಟ್ಟಿನಲ್ಲಿ ಕರಡು ಸೂತ್ರವೊಂದನ್ನು ರೂಪಿಸಲಾಗಿದೆ. ಇದರಂತೆ ಉಪಮುಖ್ಯಮಂತ್ರಿಗಳ ಪೈಕಿ ಇಬ್ಬರನ್ನು ಕೈಬಿಟ್ಟು ಉಪಚುನಾವಣೆ ಗೆದ್ದಿರುವವರಿಗೆಲ್ಲ ಸಚಿವ ಸ್ಥಾನ ದೊರೆಯುವ ಸಾಧ್ಯತೆಗಳಿವೆ.

ಪಕ್ಷದ ರಾಷ್ಟ್ರೀಯ ನಾಯಕತ್ವ ಬದಲಾಗುತ್ತಿರುವ ಹಿನ್ನೆಲೆಯಲ್ಲಿ ಪಕ್ಷದ ಅಧ್ಯಕ್ಷ ಸ್ಥಾನ ಅಲಂಕರಿಸಲಿರುವ ಜೆಪಿ ನಡ್ಡಾ ಜೊತೆ ಮುಖ್ಯಮಂತ್ರಿ ಯಡಿಯೂರಪ್ಪ ದಾವೋಸ್ ಪ್ರವಾಸದಿಂದ ವಾಪಸಾದ ನಂತರ ಚರ್ಚಿಸಿ ನಿರ್ಧಾರಕ್ಕೆ ಬರಲಿದ್ದಾರೆ ಎಂದು ಪಕ್ಷದ ಮೂಲಗಳು ಖಚಿತಪಡಿಸಿವೆ.

ಜೆಡಿಎಸ್-ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿ ಹೊರಬಂದಿರುವ ಹದಿನೇಳು ಜನರಿಗೂ ಸಚಿವ ಪದವಿ ನೀಡುವ ನಿಟ್ಟಿನಲ್ಲಿ ಬಿಜೆಪಿಯಲ್ಲಿ ಸಕಾರಾತ್ಮಕ ಅಭಿಪ್ರಾಯ ಕೇಳಿಬಂದಿದೆ. ಇದೇ ನಿಟ್ಟಿನಲ್ಲಿ ಎಲ್ಲ ಹದಿನೇಳು ಜನರಿಗೂ ಸಚಿವ ಪಟ್ಟ ನೀಡಲೇಬೇಕೆಂದು ಪಟ್ಟು ಹಿಡಿದಿರುವುದು. ಇದೇ ದಿಸೆಯಲ್ಲಿ ಪ್ರತಿಕ್ರಿಯಿಸಿರುವ ಸಚಿವ ಕೆಎಸ್ ಈಶ್ವರಪ್ಪ ತ್ಯಾಗ ಮಾಡಿರುವ ಎಲ್ಲರಿಗೂ ಸಚಿವ ಪದವಿ ಕಲ್ಪಿಸುವುದಾಗಿ ಹೇಳಿಕೆ ನೀಡಿರುವುದು ಹೊಸ ಬೆಳವಣಿಗೆ.

ಇತ್ತೀಚೆಗೆ ರಾಜ್ಯಕ್ಕೆ ಭೇಟಿ ನೀಡಿದ್ದ ಬಿಜೆಪಿ ವರಿಷ್ಠ ಅಮಿತ್ ಶಾ ರಾಜೀನಾಮೆ ನೀಡಿ ಹೊರಬಂದಿರುವ ಎಲ್ಲರಿಗೂ ಸಚಿವ ಪದವಿ ನೀಡಲು ಹಸಿರು ನಿಶಾನೆ ತೋರಿದ್ದಾರೆ ಎನ್ನಲಾಗಿದೆ. ಆದರೆ, ಮೊದಲ ಹಂತದಲ್ಲಿ ಒಂಬತ್ತು ಶಾಸಕರೂ ಸೇರಿದಂತೆ ಒಟ್ಟು ಹನ್ನೊಂದು ಜನರನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳುವಂತೆ ಸೂಚಿಸಿರುವುದು ಒಟ್ಟಾರೆ ಜಿಜ್ಞಾಸೆಗೆ ಕಾರಣವಾಗಿದೆ.

**ಬಿಎಸ್‌ವೈ ವಿದೇಶಿ ಯಾತ್ರೆ ನಂತರ ವಿಸ್ತರಣೆ**

ಈಗಾಗಲೇ ನಿರ್ಧರಿಸಿರುವಂತೆ ಈಗಿರುವ ಮೂವರಲ್ಲಿ ಇಬ್ಬರು ಉಪಮುಖ್ಯಮಂತ್ರಿಗಳು ಸ್ಥಾನ ಕಳೆದುಕೊಳ್ಳಲಿದ್ದಾರೆ. ಒಟ್ಟಾರೆಯಾಗಿ ಇಬ್ಬರಿಗೆ ಮಾತ್ರ ಉಪಮುಖ್ಯಮಂತ್ರಿ ಪಟ್ಟ ದೊರೆಯಲಿದೆ. ಹೊಸದಾಗಿ ಸೇರ್ಪಡೆಗೊಳ್ಳಲಿರುವ ಒಬ್ಬರು ಮತ್ತು ಈಗಾಗಲೇ ಇರುವ ಒಬ್ಬರು ಉಪಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಯಲಿದ್ದಾರೆ.

ಬಿಜೆಪಿ ಮೂಲಗಳ ಪ್ರಕಾರ ರಾಜೀನಾಮೆ ನೀಡಿದ್ದ ಒಂಬತ್ತು ಶಾಸಕರು ಸೇರಿದಂತೆ ಒಟ್ಟು ಹನ್ನೊಂದು ಜನರನ್ನು ಸಂಪುಟಕ್ಕೆ ಸೇರ್ಪಡೆಗೆ ನಿರ್ಧರಿಸಲಾಗಿದೆ. ಅಮಿತ್ ಶಾ ಸೂಚನೆ ಮೇರೆಗೆ ಒಟ್ಟು ಹನ್ನೊಂದು ಜನರನ್ನು ಸೇರ್ಪಡೆ ಮಾಡಿಕೊಳ್ಳುವುದು ಖಚಿತವಾಗಿದೆ. ಆದರೆ, ಈಗಾಗಲೇ ಪ್ರಸ್ತಾಪ ಇರುವಂತೆ ಸಂಪುಟದಿಂದ ಯಾರನ್ನು ಕೈಬಿಡಬೇಕೆಂಬುದರ ಬಗ್ಗೆ ಖಚಿತ ನಿರ್ಣಯಕ್ಕೆ ಬಂದಿಲ್ಲ. ಆದರೆ, ಮೂವರು ಹಿರಿಯ ಸಚಿವರ ತಲೆದಂಡ ಖಚಿತ ಎಂದು ಹೇಳಲಾಗಿದೆ.



- ಸಂಪುಟ ವಿಸ್ತರಣೆಗೆ ಕರಡು ಸೂತ್ರ
- ಸ್ಥಾನ ಕಳೆದುಕೊಳ್ಳಲಿರುವ ಇಬ್ಬರು ಉಪಮುಖ್ಯಮಂತ್ರಿಗಳು
- ಉಪಚುನಾವಣೆ ಗೆದ್ದಿರುವವರಿಗೆಲ್ಲ ಸಚಿವ ಸ್ಥಾನ
- ಬಿಎಸ್‌ವೈ ದಾವೋಸ್ ಪ್ರವಾಸದಿಂದ ವಾಪಸ್ಸಾದ ನಂತರ ವಿಸ್ತರಣೆ
- ಜೆಪಿ ನಡ್ಡಾ ಜೊತೆ ಚರ್ಚಿಸಿದ ನಂತರವೇ ವಿಸ್ತರಣೆ
- ಮೊದಲ ಹಂತದಲ್ಲಿ ಹನ್ನೊಂದು ಜನರಿಗಷ್ಟೇ ಅವಕಾಶ

### ಋಣ

ಹದಿನೇಳು ಜನರ ತ್ಯಾಗದಿಂದ ಅಧಿಕಾರಕ್ಕೆ ಬಂದಿದ್ದೇವೆ. ಅವರ ಋಣ ತೀರಿಸುತ್ತೇವೆ.

। ಕೆಎಸ್ ಈಶ್ವರಪ್ಪ ಸಚಿವ